


### ಜನ ಸಂಘರ್ಷ

ಆನೆಗೆ ಎಲ್ಲಿದೆ ದಾರಿ? ಪ್ರವೀಣ ಕುಲಕರ್ಣಿ ಅವರ ಮುಖಪುಟ ಲೇಖನ (ಸುಧಾ, ಜುಲೈ 20) ಆನೆ ಮತ್ತು ಜನ ಸಂಘರ್ಷಕ್ಕೆ ಕಾರಣವನ್ನು ವಿವರಿಸಿದೆ. ಆನೆ ಪಥವನ್ನು ಹಾಳು ಮಾಡಿ ನಾಡಿಗೆ ಬಂದು ಜನರಿಗೆ ತೊಂದರೆ ಕೊಡುತ್ತವೆ ಎಂದು ಹೇಳುವುದು ಎಷ್ಟು ಸರಿ?

—ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ,
ಎಸ್. ಲಕ್ಷ್ಮೀನರಸಿಂಹ ಚಾಮರಾಜನಗರ

### ಮನೋಜ್ಞವಾಗಿತ್ತು

ವಿಚಾರ ಲಹರಿಯಲ್ಲಿ ಮಹಾನ್ ದಾರ್ಶನಿಕ ಸಾಕ್ರೆಟಿಸ್ ಬಗ್ಗೆ ಮೂಚಿಯವರ ಚಿಂತನೆ ತುಂಬಾ ಚೆನ್ನಾಗಿತ್ತು. ಜಗತ್ತಿನಲ್ಲಿ ಕಪ್ಪು ಇದ್ದಾಗಲೇ ಬಿಳಿಗೊಂದು ನೆಲೆ– ಬೆಲೆ; ಅಂತೆಯೇ ಒಳ್ಳೆಯದಕ್ಕೆ ಕೆಟ್ಟದಿದ್ದಾಗಲೇ ಬೆಲೆ ಎಂಬ ವಿಚಾರವನ್ನು ಮನೋಜ್ಞವಾಗಿ ತಿಳಿಸಿದ್ದಾರೆ.

—ಸವಿತಾ ಮಂಜುನಾಥ ಕೊಟ್ಟೂರು,
ಗಾಣಧಾಳು ರಾಮಣ್ಣ ಚಿತ್ರದುರ್ಗ,
ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

### ಅರ್ಥಪೂರ್ಣ ಬರಹ

'ನಿಮ್ಮೊಡನೆ'ಯಲ್ಲಿ 'ಅಕ್ಷರತಾಯಿ ಸಮೃದ್ಧಿ ಕರುಣಿಸಲಿ' (ಎನ್. ಉದಯಕುಮಾರ್) ಬರಹ ಅರ್ಥಪೂರ್ಣವಾಗಿದೆ. ಸರ್ಕಾರಿ ಶಾಲೆಗಳ ಬಗ್ಗೆ ಸರ್ಕಾರದ ಅನಾದರಣೆಯನ್ನು ಲೇಖಕರು ನೇರ ಮಾತುಗಳಲ್ಲಿ ಹೇಳಿದ್ದಾರೆ.

—ಬಂಟ್ವಾಳ ಸೂರ್ಯನಾರಾಯಣರಾವ್
ಮಂಡ್ಯ, ಹುರುಕಡ್ಲಿ ಶಿವಕುಮಾರ್
ಬಾಚಿಗೊಂಡನಹಳ್ಳಿ,
ಎಸ್. ಸುಂದರ್ ಬೆಂಗಳೂರು

### ಸೊಗಸಾಗಿದೆ

ಮನೆಯಂಗಳದ ಅತಿಥಿಗಳು (ನಿರಂಜನ ವಾನಳ್ಳಿ) ಲೇಖನ ಚೆನ್ನಾಗಿದೆ. ಮಳೆಗಾಲದಲ್ಲಿ ಊರಿಗೆ ಹೋಗಿ ಬಂದಂತಹ ಅನುಭವವಾಯಿತು.

—ಶಾಲಿನಿ, ಬೆಂಗಳೂರು, ಸೀತಾ ಕೇಶವ ಸಿಡ್ನಿ,
ನಾರಾಯಣ ಯಾಜಿ ಶಿರಾಲಿ

### ಮಾರ್ಮಿಕ ಕಥೆ

ಕಥೆ 'ಕರೆದರೆ ಬಾರೆನೆ' (ಗೋಪಾಲಗೌಡ ಕಲ್ವಮಂಜಲಿ) ಮಾರ್ಮಿಕವಾಗಿದೆ. ಅನುಕಂಪದ ನೆಪದಲ್ಲಿ ಅಸಹಾಯಕ ವಿಧವೆಯರನ್ನು ಕೆಲ ಗೃಹಸ್ಥ ಗಂಡಸರು ಹೇಗೆ ಕಾಮದ ಬಲೆಗೆ ಸಿಲುಕಿಸಿಕೊಳ್ಳುತ್ತಾರೆ ಎಂಬ ಕಠೋರ ಸತ್ಯವನ್ನು ಹೊರಹಾಕಿದೆ.

—ಪ.ಚಂದ್ರಕುಮಾರ ಗೌನಹಳ್ಳಿ,
ರಾಜಶೇಖರ ಹಾದಿಮನಿ ಧಾರವಾಡ

### ಅದ್ಭುತ ಮರಳು ಶಿಲ್ಪ

ವಂಡರ್‌ಪುಟದಲ್ಲಿ (ಪ್ರಿಯಾಂಕ ವಿ.ಎಚ್.) ಜಪಾನಿನ ಮರಳು ಶಿಲ್ಪ ಪ್ರಶಸ್ತಿ ವಿಜೇತ ಕಲಾವಿದ ಟಿ. ಹೊಸಾಕ ಅವರ ಪ್ರತಿಭೆಯ ಅನಾವರಣವಾಗಿದ್ದು ಅದ್ಭುತವಾಗಿದೆ.

—ಹೊಕ್ಕಳಿಕೆ ರಾಮಚಂದ್ರ, ಮಣಿಪಾಲ

### ಆತ್ಮೀಯ ಭಾವನೆ

'ಸವಿ ಸವಿ ನೆನಪು' ಅಂಕಣದಲ್ಲಿ 'ಗೆಳೆತನ ಬೆಸೆದ ಪಾರಿವಾಳ' (ತಾರಾನಾಥ ಮೇಸ್ತಶಿರೂರ) ಬರಹ ಓದಿ ಪಾರಿವಾಳದೊಂದಿಗೆ ಆತ್ಮೀಯ ಭಾವನೆ ಬರುವಂತೆ ಮಾಡಿತು.

—ರುಕ್ಮಿಣಿ ಕೃ ದೇಶಪಾಂಡೆ ಗೋಕಾಕ

### ಸೊಗಸಾಗಿದೆ

'ತಾಂಬೂಲ ಪುರಾಣ' (ಸಾವಿತ್ರಿಕೆ. ಅಲ್ಲೂರು) ಲೇಖನ ಸೊಗಸಾಗಿದೆ. ನಮ್ಮ ಸಂಸ್ಕೃತಿ, ಸಂಪ್ರದಾಯಗಳ ಬಗ್ಗೆ ವಿವರವಾದ ಮಾಹಿತಿ ಇದೆ.

—ಟಿ.ಆರ್. ಲಲಿತರಾವ್ ಬೆಂಗಳೂರು

### ಉಳಿವಿನ ಬಗ್ಗೆ ಚಿಂತನೆ

'ಹಾವುಗಳನ್ನು ಬದುಕಲು ಬಿಡಿ'(ಆರ್.ಕೆ. ಮಧು) ಲೇಖನ ಅಳಿವಿನಂಚಿಗೆ ಸರಿಯುತ್ತಿರುವ ಹಾವುಗಳ ಸಂತತಿಯ ಉಳಿವು ಬಗ್ಗೆ ಚಿಂತಿಸುವಂತೆ ಮಾಡಿತು.

—ಮೀನಾಕ್ಷಿ ಕೆ. ರಾಮಗುಂಡಿ, ಬೈಲಹೊಂಗಲ,
ಎಚ್.ಆನಂದಕುಮಾರ್ ಚಿತ್ರದುರ್ಗ, ಕೋಟೇಶ್ವರ
ಸೂರ್ಯನಾರಾಯಣರಾವ್ ಬೆಂಗಳೂರು

### ಗಂಭೀರ ಚಿಂತನೆ

ಆರೋಗ್ಯ ಲೇಖನ 'ಸ್ವಯಂ ವೈದ್ಯರಾಗಬೇಡಿ' (ಡಾ.ಮುರಲೀ ಮೋಹನ ಚೂಂತಾರು) ಔಷಧಿ ಸೇವನೆ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಮಾಡಿತು.

—ಕೆ.ಪಿ. ರಾಮಗುಂಡಿ ಬೈಲಹೊಂಗಲ

### ಸರಾಗವಾಗಿ ಓದಿಸಿತು

'ಸಿನಿಮಾವನ್ನು ಟೀವಿ ಓವರ್‌ಟೇಕ್ ಮಾಡಿಲ್ಲ' (ಬಿ.ಎಂ. ಹನೀಫ್) ರಮೇಶ್ ಅರವಿಂದ್ ಸಂದರ್ಶನ ಬರಹ ಸರಾಗವಾಗಿ ಓದಿಸಿತು. ಟೀವಿಯಲ್ಲಿ ಸಾಧಕರ ಪರಿಚಯ ಹಾಗೂ ಸಾಧನೆಯನ್ನು ರಮೇಶ್ ಅವರು ಸಮಾಧಾನವಾಗಿ, ಸ್ವಾರಸ್ಯಕರವಾಗಿ ನಡೆಸಿಕೊಡುತ್ತಿದ್ದರು.

—ಲಲಿತಾ ಅಂಬಾಗಿಲು ಉಪ್ಪುಂದ,
ಮುಕುಂದ ಹೆರಕಲ್ಲ ಕಲಬುರಗಿ,
ಶ್ರೀನಾಥ್ ಕೊನೇಟಿ ಬೆಂಗಳೂರು

### ಬೇಂದ್ರೆ ಗ್ರಂಥ ಬಹುಮಾನಕ್ಕೆ ಆಹ್ವಾನ

ಧಾರವಾಡದ ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, 40 ವರ್ಷ ಒಳಗಿನ ಲೇಖಕ/ ಲೇಖಕಿಯರಿಂದ ಬೇಂದ್ರೆ ಯುವ ಗ್ರಂಥ ಬಹುಮಾನಕ್ಕೆ ಅರ್ಜಿ ಆಹ್ವಾನಿಸಿದೆ. ಲೇಖಕರಿಗೆ 40 ವರ್ಷ ಮೀರಿರಬಾರದು. ಲೇಖಕರು ತಮ್ಮ ಜನ್ಮದಿನಾಂಕದ ದಾಖಲೆ ಯನ್ನು ಕಡ್ಡಾಯವಾಗಿ ಲಗತ್ತಿಸಬೇಕು. ಗ್ರಂಥ ಬಹುಮಾನಕ್ಕೆ 8 ಸಾಹಿತ್ಯ ಪ್ರಕಾರದಲ್ಲಿ ಪ್ರಕಟಗೊಂಡ ಕೃತಿಗಳನ್ನು ಆಹ್ವಾನಿಸಲಾಗಿದ್ದು, ಕಾವ್ಯ, ಕತೆ, ನಾಟಕ, ಕಾದಂಬರಿ, ಜೀವನ ಚರಿತ್ರೆ/ಆತ್ಮ ಚರಿತ್ರೆ, ವಿಮರ್ಶೆ, ಸಂಶೋಧನೆ/ ಸಂಪಾದನೆ (ಹಳಗನ್ನಡ/ ನಡುಗನ್ನಡ ಕೃತಿಗಳಿಗೆ ಸಂಬಂಧಿಸಿ) ಹಾಗೂ ಅನುವಾದ ಸಾಹಿತ್ಯ ಪ್ರಕಾರಗಳನ್ನು ಒಳಗೊಂಡಿರಬೇಕು. ಪುಸ್ತಕ ಕಳಿಸಲು ಕೊನೆಯ ದಿನ ಆಗಸ್ಟ್ 15. ವಿಳಾಸ: ಸದಸ್ಯ ಕಾರ್ಯದರ್ಶಿಗಳು, ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಬೇಂದ್ರೆ ಭವನ, ಸಾಧನಕೇರಿ, ಧಾರವಾಡ 580008ಕ್ಕೆ ಕಳಿಸಬೇಕು. ದೂರವಾಣಿ: 08362 435327

